**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 424/2023**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ01**

**ದಿನಾಂಕಃ** 04.09.2025 **ಸಿಡಬ್ಲ್ಯೂ01**

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ಘಟನೆ ಬಗ್ಗೆ ನನಗೆ ಯಾರು ವೈಯಕ್ತಿಕವಾಗಿ ದೂರು ಸಲ್ಲಿಸಿಲ್ಲ ಸಾಕ್ಷಿಯು ಮುಂದುವರೆದು ನನಗೆ ಘಟನೆ ಬಗ್ಗೆ ಮೀಡಿಯಾದಲ್ಲಿ ತಿಳಿದಿರುತ್ತದೆ ಎಂದು ನುಡಿಯುತ್ತಾರೆ. ಯುಟ್ಯೂಬ್ ನಲ್ಲಿ ಒಂದು ನ್ಯೂಸ್ ಚಾನಲ್ ಮೂಲಕ ನನಗೆ ಮಾಹಿತಿ ತಿಳಿದಿರುತ್ತದೆ. ಯಾವ ಚಾನಲ್ ಎಂದು ನನಗೆ ಮಾಹಿತಿ ಇಲ್ಲ. ಈ ವಿಚಾರವನ್ನು ನನ್ನ ವರದಿಯಲ್ಲಿ ಹೇಳಿಲ್ಲ. ಈ ರೀತಿ ಯುಟ್ಯೂಬ್ ನಲ್ಲಿ ದಿಃ 08.02.2023 ರಂದು ಮದ್ಯಾಹ್ನ 3.40 ಗಂಟೆಗೆ ಪ್ರಸಾರವಾಗುತ್ತಿತ್ತು. ಸದರಿ ಸಂದರ್ಭದಲ್ಲಿ ನಾನು ಹುಬ್ಬಳ್ಳಿಯ ನಮ್ಮ ಕಚೇರಿಯಲ್ಲಿ ಇದ್ದೆನು. ಈ ರೀತಿ ಮಾಧ್ಯಮದಲ್ಲಿ ಪ್ರಸಾರವಾದ ವಿಚಾರ ನಿಜ ಅಥವಾ ಸುಳ್ಳು ಎಂದು ನಾನು ದಾವಣಗೆರೆಯ ನಮ್ಮ ಕಚೇರಿಯ ಅಧಿಕಾರಿಗಳು ವಿಚಾರಣೆ ಮಾಡಿದ್ದೇನೆ ಈ ರೀತಿ ವಿಚಾರಣೆಯನ್ನು ಅದೇ ದಿನ ಮಾಡಿದ್ದೇನೆ. ಈ ರೀತಿ ದಾವಣಗೆರೆಯ ಅಧಿಕಾರಿಗಳನ್ನು ಸಂಪರ್ಕಿಸಿದ ಬಗ್ಗೆ ನನ್ನ ವರದಿಯಲ್ಲಿ ಹೇಳಿಲ್ಲ. ನಾನು ದಾವಣಗೆರೆ ಕಚೇರಿಯ ಸಿಬ್ಬಂದಿಯವರನ್ನು ಸಂಪರ್ಕಿಸಿಲ್ಲ ಎಂದರೆ ಸರಿಯಲ್ಲ. ನಾನು ಮಾರನೇ ದಿನ ಘಟನಾ ಸ್ಥಳಕ್ಕೆ ಬೇಟಿ ನೀಡುವ ಪೂರ್ವದಲ್ಲಿ ದಾವಣಗೆರೆಯ ನಮ್ಮ ಕಚೇರಿಗೆ ಬೇಟಿ ನೀಡಿದ್ದೆ ಈ ವಿಚಾರವನ್ನು ನನ್ನ ವರದಿಯಲ್ಲಿ ತಿಳಿಸಿಲ್ಲ. ಘಟನಾ ಸ್ಥಳಕ್ಕೆ ನಾನು ಒಬ್ಬಳೇ ಹೋಗಿದ್ದೆ. ನಾನು ಘಟನಾ ಸ್ಥಳಕ್ಕೆ ನನ್ನ ಸರ್ಕಾರಿ ವಾಹನದಲ್ಲಿ ಹೋಗಿದ್ದೆ. ಸದರಿ ಬೇಟಿಗೂ ಪೂರ್ವದಲ್ಲಿ ನಾನು ಸದರಿ ಫ್ಯಾಕ್ಟರಿ ಬೇಟಿ ನೀಡಿರಲಿಲ್ಲ. ನಮ್ಮ ಕಚೇರಿಯ ಅಧೀನದಲ್ಲಿ ಬರುವ ಕಾರ್ಖಾನೆಗೆ ಕಾಲ ಕಾಲಕ್ಕೆ ಬೇಟಿ ನೀಡುವುದು ಮತ್ತು ಸುಸ್ಥಿತಿಯ ಬಗ್ಗೆ ತಿಳಿದುಕೊಳ್ಳುವುದು ನಮ್ಮ ಕರ್ತವ್ಯ ಎಂದರೆ ಸರಿ. ಆರೋಪಿಯ ಕಾರ್ಖಾನೆಯ ಬಗ್ಗೆ ನಮ್ಮ ಕಚೇರಿಗೆ ಯಾವುದೇ ದೂರು ಬಂದಿಲ್ಲ ಎಂದರೆ ಸರಿ. ನಾನು ಸ್ಥಳಕ್ಕೆ ಬೇಟಿ ನೀಡಿದಾಗ ಕಾರ್ಖಾನೆಯ ಮಾಲೀಕರು ಅಲ್ಲಿ ಇರಲಿಲ್ಲ ಎಂದರೆ ಸರಿ. ನಾನು ಬೇಟಿ ನೀಡಿದ ಸಂದರ್ಭದಲ್ಲಿ ಮೃತ ಕಾರ್ಮಿಕನ ಕರ್ತವ್ಯ ನೇಮಕದ ಬಗ್ಗೆ ದಾಖಲೆ ಪರಿಶೀಲನೆ ಮಾಡಿರುತ್ತೇನೆ ಆದರೆ ಯಾವುದೇ ದಾಖಲೆಗಳನ್ನು ನನ್ನ ವಶಕ್ಕೆ ಪಡೆದಿಲ್ಲ. ಕಾರ್ಖಾನೆಗಳಲ್ಲಿ ಡ್ರೈಯರ್ ಆಪರೇಟರ್ ಆಗಿ ಕೆಲಸ ಮಾಡುವ ವ್ಯಕ್ತಿ ಪರವಾನಿಗೆಯನ್ನು ಹೊಂದಿರಬೇಕು ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಬೇಟಿ ನೀಡಿದ ಸಂದರ್ಭದಲ್ಲಿ ಕಾರ್ಖಾನೆ ಅಕ್ಕಪಕ್ಕದಲ್ಲಿದ್ದ ಸಾರ್ವಜನಿಕರನ್ನು ವಿಚಾರಣೆ ಮಾಡಿಲ್ಲ. ನಿಪಿ.1 ರಲ್ಲಿ ನಮೂದಿಸಿದ ಅಂಶಗಳು ಡ್ರೈಯರ್ ವಿಭಾಗಕ್ಕೆ ಸಂಬಂದಿಸಿದ ಅಂಶಗಳು ಎಂದರೆ ಸರಿಯಲ್ಲ. ಏರ್ ಕಾಂಪ್ರೆಸರ್ ವಿಭಾಗ ಬೇರೆ ಮತ್ತು ಡ್ರೈಯರ್ ವಿಭಾಗ ಬೇರೆ ಬೇರೆ ಎಂದರೆ ಸಾಕ್ಷಿಯು ಸದರಿಯವುಗಳು ಒಂದಕ್ಕೊಂದು ಸಂಬಂಧಿಸಿದ ವಿಭಾಗಗಳು ಆಗಿರುತ್ತವೆ ಎಂದು ನುಡಿಯುತ್ತಾರೆ. ನಿಪಿ.1 ರಂತೆ ವರದಿಯನ್ನು ಬರೆಯಲು ನನಗೆ ಕಾರ್ಖಾನೆ ಸಿಬ್ಬಂದಿ ಮಾಹಿತಿ ನೀಡಿರುತ್ತಾರೆ. ಸದರಿಯವರೆಂದರೆ ಹೆಚ್ ಹೆಚ್ ಬಸವರಾಜ ಕಾರ್ಖಾನೆ ಅಕೌಂಟಂಟ್. ನಾನು ಸ್ಥಳಕ್ಕೆ ಬೇಟಿ ನೀಡಿದಾಗ ಕಾರ್ಖಾನೆಯಲ್ಲಿ 30 ಜನ ಸಿಬ್ಬಂದಿ ಇದ್ದರು. ನಿಪಿ.1 ಕ್ಕೆ ಸದರಿ 30 ಜನರಲ್ಲಿ

ಯಾರನ್ನು ಸಾಕ್ಷಿದಾರರನ್ನಾಗಲು ನಾನು ಕೇಳಿರುತ್ತೇನೆ. ನಿಪಿ.1 ಕ್ಕೆ ಬಸವರಾಜ ಹೆಚ್ ಹೆಚ್ ರವರ ಸಹಿ ಪಡೆದಿರುತ್ತೇನೆ. ಉಳಿದವರ ಸಹಿ ಪಡೆದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿಯವರ ಕೆಲಸಕ್ಕೆ ಅಡ್ಡಿ ಪಡಿಸಬಾರದು ಎಂದು ಪಡೆದಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಸ್ಥಳಕ್ಕೆ ಬೇಟಿ ನೀಡಿದ್ದೆ, ನಿಪಿ.1 ರಂತೆ ವರದಿ ಮಾಡಿ ಅದಕ್ಕೆ ಹೆಚ್ ಹೆಚ್ ಬಸವರಾಜರವರ ಸಹಿ ಪಡೆದಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಫಾರಂ ನಂ. 17 ನ್ನು ಯಾರು ನೀಡಬೇಕು ಎಂದರೆ ಸಾಕ್ಷಿಯು ಕಾರ್ಖಾನೆಯ ಮಾಲೀಕರು ಅಹಿತಕರ ಘಟನೆಯಾದ 24 ಗಂಟೆ ಒಳಗಾಗಿ ನಮ್ಮ ಕಚೇರಿಗೆ ನೀಡಬೇಕು ಎಂದು ನುಡಿಯುತ್ತಾರೆ. ಪ್ರಸ್ತುತ ಪ್ರಕರಣದಲ್ಲಿ ಫಾರಂ ನಂ. 17 ನ್ನು ಆರೋಪಿ ಸುರೇಶ ಎಸ್ ಎಸ್ ರವರು ನೀಡಿರುತ್ತಾರೆ. ನಿಪಿ.3 ನ್ನು ಆರೋಪಿ ಸುರೇಶ ನೀಡಿಲ್ಲ ಎಂದರೆ ಸರಿಯಲ್ಲ. ಕಾರ್ಖಾನೆ ಮಾಲೀಕರಿಗೆ ನೋಟಿಸ್ ನೀಡಿದ್ದೇವೆ ಮತ್ತು ಅವರು ಮರುಉತ್ತರ ನೀಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಕಾರ್ಖಾನೆ ನಿಯಮಗಳನ್ನು ಉಲ್ಲಂಘನೆ ಮಾಡಿದ್ದಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನೆಗೆ ಸಂಬಂದಿಸಿದಂತೆ ನಮ್ಮ ಕಚೇರಿಯಿಂದ ಮಾಡಿದ ಆದೇಶ ಸುಳ್ಳು ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳಕ್ಕೆ ಬೇಟಿ ನೀಡಿದಾಗ ಘಟನೆ ವಿಚಾರವಾಗಿ ಪೊಲೀಸರು ಈಗಾಗಲೇ ಪ್ರ ವ ವರದಿ ದಾಖಲಿಸಿದ ಬಗ್ಗೆ ನನಗೆ ತಿಳಿದು ಬಂದಿರುತ್ತದೆ. ಮದುಕರ ಮತ್ತು ರಾಜೀವರವರ ಹೇಳಿಕೆ ಪಡೆದಿಲ್ಲ. ಸಾಕ್ಷಿಯು ಮುಂದುವರೆದು ಸದರಿಯವರು ನಾನು ಸ್ಥಳಕ್ಕೆ ಬೇಟಿ ನೀಡಿದ ದಿನ ಸ್ಥಳದಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ. ಬಸವರಾಜ ಮತ್ತು ಜಾಕೀರ ರವರು ನನಗೆ ಯಾವುದೇ ರೀತಿಯ ಮಾಹಿತಿ ನೀಡಿಲ್ಲ ಹಾಗೂ ಯಾವುದೇ ದಾಖಲೆಗಳಿಗೆ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ದಿಃ 08.02.2023 ರಂದು ... ........... ಪರಿಶೀಲನಾ ವರದಿಯನ್ನು ನೀಡಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿಯಲ್ಲ. ದಿಃ 01.03.2023 ರಂದು ............... ಆರೋಪಿಯನ್ನು ಗುರುತಿಸುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ತಮ್ಮ ಕಾರ್ಖಾನೆಯನ್ನು ಸುಸ್ಥಿತಿಯಲ್ಲಿ ಇಟ್ಟುಕೊಂಡಿದ್ದು ಯಾವುದೇ ನಿಯಮಗಳನ್ನು ಉಲ್ಲಂಘನೆ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಹಾಗೂ ಮೃತನ ಸಾವಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಈ ವಿಚಾರ ತಿಳಿದಿದ್ದರೂ ಸಹ ಆರೋಪಿ ವಿರುದ್ದ ಸುಳ್ಳು ವರದಿ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

sd/

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ